ತೊಟ್ಟೆಯನ್ನು ತೋರಿಸಿದ. ಅವರು ಪೆದ್ದು ಪೆದ್ದಾಗಿ ನಕ್ಕರು. 'ಏ ಯಂಗ್ ಮ್ಯಾನ್ ಏ ಯಂಗ್ ಮ್ಯಾನ್ ಸ್ವಲ್ಪ ನಿಲ್ಲು' ಅಂತ ಕರೀತಾ ಇದ್ರೂ ಹಿಂತಿರುಗಿ ನೋಡದೇ ಮನೆಯ ಕಡೆ ಬಂದ. ಹೆಂಡತಿಗೆ ಆ ಮಾವಿನ ಹಣ್ಣುಗಳನ್ನು ಕೊಟ್ಟ. ತಾನು ಮುದುಕನ ವಿರುದ್ಧ ಜಯ ಸಾಧಿಸಿದೆ ಅಂತ ಹೆಂಡತಿಯ ಎದುರು ಕೊಚ್ಚಿಕೊಂಡ.

ಆದರೆ, ಆ ಸಂತೋಷ ಹೆಚ್ಚುಕಾಲ ಉಳಿಯಲಿಲ್ಲ. ಆವತ್ತು ವಾಕಿಂಗಿಗೆ ಹೋಗುವಾಗಲೇ ರಾಯರು ಸಿಕ್ಕಿ, ಅವನನ್ನು ಹಣ್ಣುಗಾಯಿ ನೀರುಗಾಯಿ ಮಾಡಿದ್ದರು. ಬೆಳಗ್ಗೆ ತಾನು ವಿಜಯ ಸಾಧಿಸಿದ್ದಕ್ಕೆ ತನ್ನ ಮೇಲೆ ಹೀಗೆ ಸೇಡು ತೀರಿಸಿಕೊಂಡ ಮುದುಕ ಅಂತ ಸಿಟ್ಟಲ್ಲಿ ಹಲ್ಲು ಕಡೀತಾ ಸ್ನಾನ ಮಾಡ್ತಾ ಇದ್ದ. ಷವರಿನ ಅಡಿಯಲ್ಲಿ ನಿಂತವನಿಗೆ ಎಲ್ಲ ನೆನಪಾಗಿ ಸ್ನಾನದ ಲಯವೇ ತಪ್ಪಿದ ಹಾಗಿತ್ತು. 'ಓಯ್ ಇನ್ನೂ ಆಗ್ಲಿಲ್ವಾ ಸ್ನಾನ'? ಅಂತ ಹೆಂಡತಿ ಕೇಳಿದಾಗಲೇ ವಾಸ್ತವಕ್ಕೆ ಬಂದದ್ದು.

ದೇವಸ್ಥಾನ ಸುತ್ತಾಟ, ಮಧ್ಯಾಹ್ನ ಹೊರಗಡೆ ಊಟ ಎಲ್ಲ ಆಯ್ತು. 'ಯಾವುದಾದರೂ ಮಾಲ್‌ಗೆ ಹೋಗೋಣ. ಇಷ್ಟು ಬೇಗ ಮನೆಗೆ ಹೋಗಲಿಕ್ಕೆ ಮನಸ್ಸಿಲ್ಲ ನಂಗೆ' ಅಂತ ಹೆಂಡತಿ ಹೇಳಿದಾಗ ಇಲ್ಲ ಅಂತ ಹೇಳಲಿಲ್ಲ ಅವನು. ಎಲ್ಲ ಮುಗಿಸಿ ಸಂಜೆ ಮನೆಗೆ ಬಂದರು. ಬಾಗಿಲಲ್ಲಿ ರಾಯರು ಕೂತಿದ್ದರು. 'ಅರೆ... ಅಜ್ಜ... ನೀವೇನು ಇಲ್ಲಿ ಕೂತದ್ದು?' ಸ್ನೇಹಾ ಕೇಳಿದಳು. 'ಏನಿಲ್ಲ ಹೀಗೇ ಬಂದಿದ್ದೆ.' ಅಂದರು. 'ಬನ್ನಿ ಬನ್ನಿ ಒಳಗೆ. ಇವತ್ತು ಇವರದ್ದು ಜನ್ಮ ನಕ್ಷತ್ರ, ಹಾಗೆ ದೇವಸ್ಥಾನಕ್ಕೆ ಹೋಗಿ ಸ್ವಲ್ಪ ತಿರುಗಾಡಿ ಬಂದೆವು' ಅಂದಳು. ದಿನೇಶನೂ ದಾಕ್ಷಿಣ್ಯಕ್ಕೆ ಬಿದ್ದವನಂತೆ, 'ಬನ್ನಿ ಒಳಗೆ' ಅಂದ. ರಾಯರು ಬಂದು ಕೂತರು. ಆಮೇಲೆ, 'ನಿಮ್ಮ ಹತ್ತಿರ ಒಂದು ವಿಷಯ ಹೇಳ್ಬೇಕಿತ್ತು' ಅಂದರು. 'ಹೇಳಿ ಎಂಥದು?' ಅಂದಳು ಸ್ನೇಹ. 'ನಾನು ನಿಮ್ಮ ಹತ್ತಿರ ಸುಳ್ಳು ಹೇಳಿದೆ. ನಂಗೆ ಇದ್ದದ್ದು ಒಬ್ಬನೇ ಮಗ. ಅವ ಎಂಟು ವರ್ಷಗಳ ಹಿಂದೆ ಬೈಕ್ ಆ್ಯಕ್ಸಿಡೆಂಟಿನಲ್ಲಿ ತೀರಿಕೊಂಡ. ಅನಂತರ ನನ್ನ ಹೆಂಡತಿ ಆ ವಿಷಯವನ್ನೇ ತುಂಬಾ ಮನಸ್ಸಿಗೆ ಹಚ್ಚಿಕೊಂಡು ಡಿಪ್ರೆಶನ್ನಿಗೆ ಹೋದ್ಲು. ಸ್ವಲ್ಪ ಸಮಯ ನಾನೇ ನೋಡಿಕೊಂಡೆ. ಆಮೇಲೆ ನನ್ನ ಕೈ ಮೀರಿತು. ಅವಳನ್ನು ಅಭಯಾಶ್ರಮಕ್ಕೆ ಹಾಕಿದ್ದೇನೆ. ಯಾವಾಗ್ಲಾದ್ರೂ ಒಮ್ಮೆ ಹೋಗಿ ನೋಡಿಕೊಂಡು ಬರ್ತೇನೆ. ಹೋದ್ರೆ ಅವಳಿಗೆ ನನ್ನ ಗುರ್ತ ಸಾ ಆಗೂದಿಲ್ಲ. ದಿನೇಶನನ್ನು ನೋಡಿದಾಗ ನಂಗೆ ನನ್ನ ಮಗನದ್ದೇ ನೆನಪಾಯಿತು. ನಾವಿಬ್ಬರೂ ಫ್ರೆಂಡ್ಸ್ ತರಹ ಇದ್ದೆವು. ಹಾಗಾಗಿ, ನಾನು ಇವನನ್ನು ಮಕ್ಕಾರು ಮಾಡ್ತಿದ್ದೆ. ಇವತ್ತು ಅವನ ದಿನ. ನಾನು ಡೈಲಿ ಬಿದ್ದ ಮಾವಿನ ಹಣ್ಣನ್ನು ಹೆಕ್ಕಿ ಯಾರಿಗಾದ್ರೂ ಕೊಡ್ತಿದ್ದೆ. ಇವತ್ತು ನಿಮಗೆ ಕೊಡ್ಬೇಕು ಅಂತ ಎಣಿಸಿದ್ದೆ. ಅಷ್ಟರಲ್ಲಿ ಇವ ಎಲ್ಲ ಹೆಕ್ಕಿಕೊಂಡಾಗಿತ್ತು. ಆದರೂ ನಂಗೆ ಸಿಕ್ಕಿದ್ದನ್ನು ಕೊಡುವಾ ಅಂತ ಕರೆದೆ. ಇವ ಹಿಂದೆ ತಿರುಗಿ ನೋಡದೇ ಬಂದ. ವಾಕಿಂಗಿಗೆ ಹೋದಾಗ ಸಾ ನನ್ನ ಹತ್ರ ಸರೀ ಮಾತಾಡ್ಲಿಲ್ಲ. ಇಗಾ ಈ ಮಾವಿನ ಹಣ್ಣುಗಳೂ ಸಾ ನಿಮಿಗೇ. ನಾನೊಬ್ಬ ಇರೂದು. ಹಂಚಿ ತಿಂದರೆ ಸುಖ ಅಲ್ವಾ? ಈ ಮುದುಕನಿಂದ ನಿಮಿಗೆ ಬೇಜಾರು ಆಗಿದ್ರೆ ನನ್ನನ್ನು ಕ್ಷಮಿಸಿ ಬಿಡಿ' ಅಂತ ಹೇಳಿ, ಕೊಟ್ಟರು. ಹೊರಡಲು ಎದ್ದರು.

ದಿನೇಶನ ಕಣ್ಣುಗಳ ನೀರ ಹನಿ ರಾಯರ ಪಾದಗಳ ಮೇಲೆ ಬಿದ್ದು ಚಂಡಿ ಆಗಿತ್ತು.


**ಪಿ.ಬಿ. ಪ್ರಸನ್ನ**

ದಕ್ಷಿಣ ಕನ್ನಡ ಜಿಲ್ಲೆಯ ಹಳೆಯಂಗಡಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕನ್ನಡ ಸಹ ಪ್ರಾಧ್ಯಾಪಕರು. 'ಗಣಪ ಮತ್ತು ಗಾಂಪ', 'ಮಣ್ಣಿಂದ ಕಾಯ', 'ತನುವಿನೊಳಗೆ ಹುಸಿತುಂಬಿ' ಹಾಗೂ 'ಉರಗವೇಣಿಯರೆಲ್ಲ ಕೇಳಿ' ಎಂಬ ಕಥಾಸಂಕಲನಗಳನ್ನು, ಹಾಸ್ಯಪ್ರಬಂಧಗಳ ಸಂಕಲನ ಹಾಗೂ ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ.